ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾವು ಹೇಳಿದ ಮೇಲೆ ಅಲ್ಲಿಗೆ ಹೋಗುತ್ತೇನೆಂದು ಹೇಳಿದ್ದಾರೆ. ರೈತರಿಗೆ ಅಲ್ಲಿ ಹೊಡೆದ ಮೇಲೆ ಈಗ ಸಸ್ಪೆಂಡ್ ಮಾಡಬೇಕೆಂಬುದೇ ಅವರ one of the major demands. ಇದನ್ನು ಅವರು ಮಾಡುವುದರ ಜೊತೆಗೆ ನ್ಯಾಯಾಂಗ ತನಿಖೆ ಮಾಡಬೇಕು. ರೈತರ ಸಮಸ್ಯೆಗಳಿದ್ದರೆ ಅವರ ಜೊತೆ ಕುಳಿತುಕೊಂಡು ಚರ್ಚೆ ಮಾಡೋಣ. ಆದರೆ, ಸರ್ಕಾರ ರೈತರ ಪರವಾಗಿಲ್ಲ, ನೀವು ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದೀರಿ, ರೈತರ ವಿರೋಧಿ ಇದ್ದೀರಿ. ರೈತರ ಬಗ್ಗೆ ನಿಮಗೆ slim sympathy ಇದೆ. ಈ ರೈತ ವಿರೋಧಿ ಸರ್ಕಾರವನ್ನು ವಿರೋಧ ಮಾಡುತ್ತಾ ನೀವುಗಳು ರೈತರ ವಿರೋಧಿಗಳೆಂದು ಹಾಗೂ ರೈತರ ಪರ ನಿಮಗೆ ಕಾಳಜಿ ಇಲ್ಲವೆಂದು ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ವಿ. ನಾಗರಾಜ್ : ಪ್ರಚಾರಕ್ಕೋಸ್ಕರ ಅವರು ಈ ರೀತಿಯಾಗಿ ಮಾಡುತ್ತಿದ್ದಾರೆ. ಈ ರೀತಿಯಾಗಿಯೇ ಅವರು ಮಾಡುತ್ತಾರೆಂದು ಮುಂಚಿತವಾಗಿಯೇ ಗೊತ್ತಿತ್ತು. ರೈತರ ಬಗ್ಗೆ ಅವರಿಗೆ ಕಾಳಜಿ ಇಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಈ ಸರ್ಕಾರಕ್ಕೆ ರೈತರ ಬಗ್ಗೆ ಆಸಕ್ತಿ ಇಲ್ಲ. ಇವರು ಅಧಿಕಾರಿಗಳಿಗೆ ರಕ್ಷಣೆ ಕೊಡುವಂಥ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ, ಅವರು ನೀಡಿದ ಉತ್ತರವನ್ನು ವಿರೋಧ ಮಾಡಿ ನಾವೂ ಕೂಡ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಳ ಪಕ್ಷದ ಸದಸ್ಯರೂ ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರೈತರ ಸಮಸ್ಯೆಗಳು ಬಗೆಹರಿಯಬೇಕೆಂದು ಮನಸ್ಸು ಅವರಿಗಿಲ್ಲ. ರೈತರ ಹೆಸರಿನಲ್ಲಿ ರಾಜಕಾರಣ ಮಾಡಬೇಕೆಂಬ ಉದ್ದೇಶದಿಂದ ಈ ವೇದಿಕೆಯನ್ನು ದುರುಪಯೋಗ ಮಾಡುವಂಥ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಕೂಡ ಪ್ರತಿಪಕ್ಷದವರಿಗೆ ಶೋಭೆ ತರತಕ್ಕಂಥದ್ದಲ್ಲ. ಬಿಚ್ಚು ಮನಸ್ಸಿನಿಂದ ನಾನು ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾಳೆ ದಿವಸ